ದಿ: 19-12-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

:ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಆರ್ ಕೆ ಕೆ ವಕೀಲರಿಂದ

ದಾವಾ ಸರ್ವೆ ನಂಬರ 49/1 ರ ಆಸ್ತಿಯನ್ನು ನನ್ನ ಮಾವ ಗೌಸುಸಾಬ ಮದರಸಾಬ ಯಾವಗಲ್ ರವರು ಖರೀದಿಸಿರುವ ಬಗ್ಗೆ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-3 ಎಂದು, ದಾವಾ ಸರ್ವೆ ನಂಬರ 92 ರ ನನ್ನ ಅಜ್ಜ ನನ್ನ ಅತ್ತೆಯ ಹೆಸರಿನಲ್ಲಿ ಖರೀದಿಸಿರುವ ಬಗ್ಗೆ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-4 ಎಂದು, ದಾವಾ ಸರ್ವೆ ನಂಬರ 92/4 ರ ಆಸ್ತಿಗೆ ಸಂಬಂಧಪಟ್ಟ ಉತಾರೆಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-5 ಎಂದು, ದಾವಾ ಸರ್ವೆ ನಂಬರ 49/1 ರ ಆಸ್ತಿಗೆ ಸಂಬಂಧಪಟ್ಟ ಡ ನಂಬರ 1688 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-6 ಎಂದು, ದಾವಾ ಸರ್ವೆ ನಂಬರ 92/3 ರ ಉತಾರೆಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-7 ಎಂದು, ದಾವಾ ಸರ್ವೆ ನಂಬರ 92 ರ ಆಸ್ತಿಗೆ ಸಂಬಂಧಪಟ್ಟ ಡ ನಂಬರ 1669 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-8 ಎಂದು, ನನ್ನ ಅತ್ತೆ ದಾವಾ ಸರ್ವೆ ನಂಬರ 92 ನ್ನು ಖರೀದಿಸಿದ ಸಂದರ್ಭದಲ್ಲಿ ರಾಜ್ಯಸ್ವ ನಿರ್ದೇಶಕರು ಬೆಳಗಾಲಪೇಟೆ ಗ್ರಾಮಸ್ಥರಿಗೆ ನೀಡಲಾದ ಸಾರ್ವಜನಿಕ ಪ್ರಕಟಣೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-9 ಎಂದು, ದಾವಾ ಸರ್ವೆ ನಂಬರ 92 ಕ್ಕೆ ಸಂಬಂಧಪಟ್ಟ ಡ ನಂಬರ 2053 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-10 ಎಂದು ಗುರುತಿಸಲಾಯಿತು.

: ಪಾಟೀ ಸವಾಲು : ವಾದಿ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್